SINDHI HIGH SCHOOL, BENGALURU
HALF YEARLY EXAMINATION 2023 –24

SUBJECT : L 2 KANNADA
CLASS : IV
DATE : 6 / 10 / 2023

Max Marks : 80
Reading time : 8:30am – 8:45 am
Writing Time : 8:45am – 11:00 am
NO.OF SIDES : 9

---

**ಸೂಚನೆಗಳು:**

* ಪತ್ರಿಕೆಯು A ಮತ್ತು B ಎಂಬ ಎರಡು ಭಾಗಗಳನ್ನು ಮತ್ತು A B C D ಎಂಬ ನಾಲ್ಕು ವಿಭಾಗಗಳನ್ನು ಒಳಗೊಂಡಿರುತ್ತವೆ.
* ಪ್ರಶ್ನೆಪತ್ರಿಕೆಯಲ್ಲಿ ಒಟ್ಟು 15 ಮುಖ್ಯ ಪ್ರಶ್ನೆಗಳಿರುತ್ತವೆ.
* ಪ್ರಶ್ನೆಗಳ ಸೂಚನೆಗಳನ್ನು ಸರಿಯಾಗಿ ಓದಿಕೊಂಡು ಕ್ರಮವಾಗಿ ಉತ್ತರಿಸಿ.
* ಪ್ರಶ್ನೆ ಮತ್ತು ಉಪಪ್ರಶ್ನೆಗಳ ಸಂಖ್ಯೆಯನ್ನು ತಪ್ಪಿಲ್ಲದೆ ಬರೆಯಿರಿ.
* ಎರಡೂ ಭಾಗಗಳ ಪ್ರಶ್ನೆಗಳಿಗೂ ಉತ್ತರಿಸುವುದು ಕಡ್ಡಾಯ.

| | | |
|---|---|---|
| **ಭಾಗ- A** (40 ಅಂಕಗಳು) | **ವಾಚನ ಮತ್ತು ಗ್ರಹಿಕಾ ಕೌಶಲ್ಯ** | **20 ಅಂಕಗಳು** |
| | **ಅನ್ವಯಿಕ ವ್ಯಾಕರಣ** | **15 ಅಂಕಗಳು** |
| | **ಬಹುಆಯ್ಕೆ ಪ್ರಶ್ನೆ - ಪಠ್ಯಗಳ ಅಧ್ಯಯನ** | **5 ಅಂಕಗಳು** |
| **ಭಾಗ- B** (40 ಅಂಕಗಳು) | **ಬರವಣಿಗೆ ಕೌಶಲ್ಯ** | **12 ಅಂಕಗಳು** |
| | **ಪಠ್ಯಗಳ ಅಧ್ಯಯನ** | **28 ಅಂಕಗಳು** |
| | **ಒಟ್ಟುಅಂಕಗಳು** | **80 ಅಂಕಗಳು** |

PART - A ( 40 ಅಂಕಗಳು)

SECTION - A

( ವಾಚನ ಮತ್ತು ಗ್ರಹಿಕಾ ಕೌಶಲ್ಯ - 10 ಅಂಕಗಳು )

**I ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ .** **(5 x 1 = 5 )**

ಬಸಯ್ಯ ಕಡು ಬಡತನದ ಯುವಕ. ರೈತನಾಗಬೇಕೆಂಬ ಬಯಕೆ. ತಂದೆಯಿಂದ ಬಂದ ಎರಡು ಎಕರೆ ಭೂಮಿಯಿತ್ತು. ಅದು ಬಂಜರು ಗುಡ್ಡಗಳಿಂದ ಕೂಡಿದ ಭೂಮಿ. ನೀರಾವರಿ ಸೌಲಭ್ಯವಿಲ್ಲ. ಆದರೂ ಸಾಧಿಸುವ ಛಲವಿತ್ತು. ತನ್ನ ಭೂಮಿಯಲ್ಲಿದ್ದ ಗಿಡಗಂಟೆಗಳನ್ನು ತೆಗೆದ. ಅಲ್ಲಲ್ಲಿ ಇದ್ದ ಸಣ್ಣ ಪುಟ್ಟ ಬಂಡೆಗಲ್ಲುಗಳನ್ನು ಒಡೆಸಿ ಹೊರ ಹಾಕಿದ. ನೇಗಿಲಿನಿಂದ ಉಳುಮೆ ಮಾಡಿದ. ಕೊಟ್ಟಿಗೆ ಗೊಬ್ಬರ ಹಾಕಿ ಭೂಮಿಯನ್ನು ಹದ ಮಾಡಿದನು.

ಮಳೆಗಾಲದಲ್ಲಿ ತನ್ನ ಭೂಮಿಯ ಪಕ್ಕದಲ್ಲಿ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ಕಂಡನು. ಸರ್ಕಾರದಿಂದ ಹಣ ಸಹಾಯ ಪಡೆದು ಹೊಂಡ ತೆಗೆಸಿದ. ಮಳೆ ನೀರನ್ನು ಸಂಗ್ರಹಿಸಿದ. ಕೃಷಿ ಅಧಿಕಾರಿಗಳ ಜೊತೆ ಚರ್ಚಿಸಿದ. ಸಂಗ್ರಹಿಸಿದ ಮಳೆ ನೀರಿಗೆ ಹನಿ ನೀರಾವರಿ ಅಳವಡಿಸಿದನು. ವಿವಿಧ ಬೆಳೆ ಪದ್ಧತಿ ಅಳವಡಿಸಿಕೊಂಡನು. ದಾಳಿಂಬೆ, ಸಪೋಟ, ತೆಂಗು, ಹೂ ಬೆಳೆಗಳನ್ನು ಬೆಳೆದ. ಅಧಿಕ ಇಳುವರಿ ಪಡೆದನು. ಕೈತುಂಬ ಹಣ ಸಂಪಾದಿಸಿದನು. ಸುತ್ತಮುತ್ತಲಿನ ರೈತರು ಇವನ ಸಾಹಸ ಕಂಡು ಬೆರಗಾದರು. ಯುವಕನ ಸಾಧನೆ ಕಂಡು ಸರ್ಕಾರ 'ಕೃಷಿ ಪಂಡಿತ' ಪ್ರಶಸ್ತಿ ನೀಡಿ ಗೌರವಿಸಿತು.

1 ಬಸಯ್ಯ __________ ನಿಂದ ಉಳುಮೆ ಮಾಡಿದ .

ಅ) ನೇಗಿಲು ಆ) ಕತ್ತಿ ಇ) ನೀರು ಈ) ಕೃಷಿ

2. ಇವನು ತನ್ನ ಹೊಲದಲ್ಲಿ __________ ತೆಗೆಸಿದನು.

ಅ) ನೀರಾವರಿ ಆ) ಮರಳು ಇ) ಗಿಡಗಂಟೆಗಳನ್ನು ಈ) ಬೆಳೆಗಳನ್ನು

3. ಬಸಯ್ಯನಿಗೆ __________ ಆಗ ಬೇಕೆಂಬ ಬಯಕೆ ಇತ್ತು. .

ಅ) ಶಿಕ್ಷಕ ಆ) ರೈತ ಇ) ವೈದ್ಯ ಈ) ಸೈನಿಕ

4. .ಬಸಯ್ಯ ತನ್ನ ಭೂಮಿಯಲ್ಲಿ ಸಂಗ್ರಹಿಸಿದ ಮಳೆನೀರಿಗೆ __________ ಅಳವಡಿಸಿದನು.

ಅ) ಬಾವಿ ನೀರಾವರಿ ಆ) ಹನಿ ನೀರಾವರಿ ಇ) ಕೃಷಿ ನೀರಾವರಿ ಈ) ಕಾಲುವೆ

5. ಯುವಕನ ಸಾಧನೆಯನ್ನು ಕಂಡು ಸರ್ಕಾರ ನೀಡಿದ ಪ್ರಶಸ್ತಿ __________

ಅ) ಕೃಷಿ ಪಂಡಿತ ಆ) ಜ್ಞಾನ ಪಂಡಿತ ಇ) ರಾಜ್ಯ ಪಂಡಿತ ಈ) ರಾಷ್ಟ್ರ ಪಂಡಿತ

II ಈ ಕೆಳಗಿನ ಗದ್ಯಾಂಶವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (5 x 1 = 5)

ಒಂದು ಸರೋವರವಿದ್ದಿತು. ಅದರಲ್ಲಿ ಕೆಲವು ಹಂಸಗಳು ವಾಸವಿದ್ದವು. ಅದೇ ಸರೋವರಕ್ಕೆ ಮೀನು ಹಿಡಿಯಲು ಕೆಲವು ಕಾಗೆಗಳು ಬರುತ್ತಿದ್ದವು . ಆ ಗುಂಪಿನಲ್ಲಿ ಒಂದು ಜಂಭದ ಕಾಗೆ ಇತ್ತು. ಅದು ಒಂದು ದಿನ ಹಂಸದ ಬಳಿಗೆ ಹೋಗಿ " ನಾನು ಬಹಳ ಶಕ್ತಿವಂತ , ನಾನು ನಿಮಗಿಂತಲೂ ಎತ್ತರದಲ್ಲಿ ಹಾರಬಲ್ಲೆ , ಎಷ್ಟು ಹೊತ್ತು ಬೇಕಾದರೂ ಹಾರಬಲ್ಲೆ " ಎಂದು ಜಂಭದಿಂದ ಹೇಳಿಕೊಂಡಿತು.

ಕಾಗೆ ಮಾತಿಗೆ ಹಂಸವು " ಕಾಗೆರಾಯ ಅದು ಸಾಧ್ಯವಿಲ್ಲ. ನಾವೇ ನಿಮಗಿಂತಲೂ ಶಕ್ತಿಶಾಲಿ " ಎಂದು ಹೇಳಿದರೂ ಜಂಭ ಬಿಡದ ಕಾಗೆ ಹಾಗಾದರೆ ನಾವಿಬ್ಬರು ಆಕಾಶದಲ್ಲಿ ಹಾರಿ ನೋಡೇ ಬಿಡೋಣ ಎಂದು ಸವಾಲು ಹಾಕಿತು . ಆಕಾಶದಲ್ಲಿ ಕಾಗೆ - ಹಂಸದ ಹಾರಾಟ ಆರಂಭವಾಯಿತು . ಹಂಸವು ಎತ್ತರದಲ್ಲಿ ಹಾರಾಡುತ್ತಿತ್ತು. ಕಾಗೆ ಅದರ ಸಮಕ್ಕೆ ಏರಲು ಸಾಧ್ಯವಾಗಲೇ ಇಲ್ಲ . ಬಹಳ ಹೊತ್ತು ಹಂಸವು ತನ್ನ ಹಾರಾಟ ಮುಂದುವರೆಸಿತು. ಆದರೆ ಕಾಗೆಗೆ ಬಹಳ ಹೊತ್ತು ಹಾರಲಾರದೆ ಶಕ್ತಿ ಕಡಿಮೆಯಾಗುತ್ತಾ ಬೀಳುವ ಸ್ಥಿತಿಗೆ ಬಂದಿತು. ಹಂಸವು ಕಾಗೆಯ ಸ್ಥಿತಿಯನ್ನು ನೋಡಿ ಅದರ ಸಹಾಯಕ್ಕೆ ಬಂದಾಗ ಕಾಗೆಗೆ ತನ್ನ ತಪ್ಪಿನ ಅರಿವಾಗಿ ಹಂಸದ ಬಳಿ ಕ್ಷಮೆ ಕೋರಿತು.

1. ಯಾವುದು ಬೀಳುವ ಸ್ಥಿತಿಗೆ ಬಂದಿತು.

ಅ) ಆಮೆ ಆ) ಕಾಗೆ ಇ) ಹಂಸ ಈ) ಹದ್ದು

2. ಆಕಾಶದಲ್ಲಿ ಎತ್ತರಕ್ಕೆ ಹಾರಿದ ಪಕ್ಷಿ ಇದು.

ಅ) ಗಿಣಿ ಆ) ಪಾರಿವಾಳ ಇ) ಕಾಗೆ ಈ) ಹಂಸ

3. ಹಂಸಗಳು ವಾಸಿಸುತ್ತಿದ್ದ ಸ್ಥಳವಿದು

ಅ) ಸಮುದ್ರ ಆ) ಬಾವಿ ಇ) ಸಾಗರ ಈ) ಸರೋವರ

4. ಅಂತ್ಯದಲ್ಲಿ ಕಾಗೆಗೆ ತನ್ನ ತಪ್ಪಿನ ಅರಿವಾಗಿ ________ ದ ಬಳಿ ಕ್ಷಮೆ ಕೋರಿತು.

ಅ) ನವಿಲು ಆ) ಕಾಗೆ ಇ) ಹಂಸ ಈ) ಗಿಳಿ

5. ಸರೋವರದ ಬಳಿ ________ ಗಳು ಹಂಸ ಗಳನ್ನು ಹಿಡಿಯಲು ಬಂದವು .

ಅ) ರೊಟ್ಟಿ ಆ) ಮೀನು ಇ) ಕಪ್ಪೆ ಈ) ಕಾಗೆ

III. ಈ ಕೆಳಗೆ ಕೊಟ್ಟಿರುವ ಪಠಿತ ಗದ್ಯಭಾಗ " ಸಹನೆ " ಪಾಠವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಬರೆಯಿರಿ: ( 5 x 1 = 5 )

ಒಂದು ಊರಿನಲ್ಲಿ ಒಬ್ಬ ಸಿರಿವಂತನಿದ್ದ. ಅವನು ತುಂಬಾ ಒಳ್ಳೆಯವನು, ಸದ್ಗುಣಶಾಲಿಯೂ ಆಗಿದ್ದನು. ಅವನ ಹೆಸರು ಸುಗುಣಪಾಟೀಲ. ಅವನ ಬಳಿ ಒಬ್ಬ ಪ್ರಾಮಾಣಿಕ ಹಾಗೂ ನಿಷ್ಠಾವಂತನಾದ ಸೇವಕನಿದ್ದ. ಹೆಸರು ಕೆಂಪರಾಜು. ಆತನನ್ನು ಕಂಡರೆ ಸುಗುಣಪಾಟೀಲರಿಗೆ ತುಂಬಾ ಪ್ರೀತಿ ಇತ್ತು. ಯಾವುದೇ ಕೆಲಸವನ್ನಾದರೂ ನಂಬಿಕೆಯಿಂದ ಕೆಂಪರಾಜುವಿಗೆ ವಹಿಸುತ್ತಿದ್ದರು. ಒಂದು ದಿನ ಕೆಂಪರಾಜು ಮನೆಯನ್ನು ಶುಚಿಗೊಳಿಸುತ್ತಿದ್ದ. ಮೇಜು ಒರೆಸುವಾಗ ಅಕಸ್ಮಾತ್ ಮೇಲಿದ್ದ ಹೂದಾನಿ ಕೆಳಗೆ ಬಿದ್ದು ಒಡೆದು ಚೂರಾಯಿತು. ಅದೇ ಹೊತ್ತಿಗೆ ಅಲ್ಲಿಗೆ ಬಂದಿದ್ದ ಸುಗುಣಪಾಟೀಲರು ಅದನ್ನು ಗಮನಿಸಿದರು.

**ಸುಗುಣಪಾಟೀಲ** : ಏನಿದು? ಹೂದಾನಿ ಒಡೆದು ಹೋಗಿದೆ !

**ಕೆಂಪರಾಜು** : ಹೌದು ಧಣಿ, ಮೇಜು ಒರೆಸುವಾಗ ಕೈ ತಗುಲಿ ಬಿದ್ದುಹೋಯಿತು.

**ಸುಗುಣಪಾಟೀಲ** : ಕೆಲಸ ಮಾಡುವಾಗ ಜಾಗ್ರತೆ ವಹಿಸಬೇಕು. ನಿಧಾನವಾಗಿ, ಅಚ್ಚುಕಟ್ಟಾಗಿ ಮಾಡಬೇಕು. ನೀನು ಹಾಗೆ ಮಾಡಿದ್ದರೆ ಹೀಗಾಗುತ್ತಿರಲಿಲ್ಲ.

**ಕೆಂಪರಾಜು** : ನೀವು ಹೇಳಿದ್ದು ಸರಿ ಧಣಿ. ನಾನು ಕೆಲಸದ ಮೇಲೆ ನಿಗಾ ವಹಿಸದೆ ಹೀಗಾಯಿತು. ನಿಮ್ಮ ಇಷ್ಟದ ಹೂದಾನಿ ಹಾಳಾಯಿತು. ನನ್ನದೇ ತಪ್ಪು, ಇನ್ನೊಮ್ಮೆ ಇಂಥ ತಪ್ಪು ಮಾಡುವುದಿಲ್ಲ ಎಂದನು.

1 ಊರಿನ ಸಿರಿವಂತನ ಹೆಸರು ________

ಅ) ಕೆಂಪರಾಜು ಆ) ಸುಗುಣಪಾಟೀಲ ಇ) ಸೋಮಣ್ಣ ಈ) ಕರಿಯಣ್ಣ

2 ಹೂದಾನಿ ________ ಮೇಲೆ ಇತ್ತು.

ಅ) ಮರದ ಆ) ಮೇಜಿನ ಇ) ನೆಲದ ಈ) ಬೀರುವಿನ

3 ಸುಗುಣಪಾಟೀಲರಿಗೆ ________ ನನ್ನು ಕಂಡರೆ ತುಂಬಾ ಪ್ರೀತಿ.

ಅ) ಸೇವಕ ಆ) ರಾಜ ಇ) ಯಜಮಾನ ಈ) ಜನರು

4 ಮೇಜು ಒರೆಸುವಾಗ ಕೈತಗುಲಿ ಕೆಳಗೆ ಬಿದ್ದು ಚೂರಾದ ವಸ್ತು ________

ಅ) ಮೇಜು ಆ) ಹೂದಾನಿ ಇ) ಗೊಂಬೆ ಈ) ಬಾಟಲಿ

5 ಮನೆಯ ________ ಮಾಡುವಾಗ ಜಾಗ್ರತೆಯಿರಬೇಕು.

ಅ) ಊಟ ಆ) ನಿದ್ದೆ ಇ) ಪ್ರಯಾಣ ಈ) ಕೆಲಸ

IV ಈ ಕೆಳಗೆ ಕೊಟ್ಟಿರುವ ಪಠಿತ ಪದ್ಯಭಾಗ "ನನ ಕಂದ" ಪದ್ಯವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಬರೆಯಿರಿ:

(5 x 1 = 5)

ನನ ಕಂದಾ ಮುದ್ದು, ಹೊನ್ನ ತಾವರಿ ಮುದ್ದು
ಹಣ್ಣುಳ್ಳ ಗಿಡಕ ಗಿಣಿ ಮುದ್ದು । ಕಂದವ್ವ
ನೀ ಮುದ್ದು ನನ್ನ ಬಳಗಕ ॥ ೧ ॥

ನಡೆದಾಡ ಕಂದನ ನಡಗೀಯ ನೋಡೀನ
ಸಡಗರದಿಂದ ತೊಡಸೀನ । ಕಂದಯ್ಯಗ
ಆಯಿ ಮಾಡಿಸಿಕೊಟ್ಟ ಕಿರುಗೆಜ್ಜೆ ॥ ೨ ॥

ತೊಟ್ಲಾನ ಕೂಸೀಗಿ ದಿಟ್ಟ್ಯಾದಾವಂದ
ಕಟ್ಟ್ಯೇದ ನವಿಲ ಗರಿಗೋಳ । ಬಾಳಾಗ
ಕರಿಬೇವಿನ ದಿಟ್ಟ್ ತೆಗೆದೇನ ॥ ೩ ॥

ಕಂಡದ್ದು ಕನಸಾಗಿ ಉಂಡದ್ದು ಸವಿಯಾಗಿ
ಕಂದ ನೀ ಕಾಡಬೇಡೆಂದು । ಬೇಡುವೆ
ಕಂದಯ್ಯ ಮಾಡೋ ನಿದ್ದೀಯ ॥ ೪ ॥

1 ತಾಯಿಯು ತೊಟ್ಟಿಲಿಗೆ ___________ ಕಟ್ಟಿದಳು.

ಅ) ಕೋಳಿ ಪುಕ್ಕ ಆ) ತೆಂಗಿನ ಗರಿ ಇ) ಗಿಡದ ಗರಿ ಈ) ನವಿಲ ಗರಿ

2 ಮಗುವಿಗೆ ಕಿರುಗೆಜ್ಜೆಯನ್ನು ಮಾಡಿಸಿಕೊಟ್ಟವರು __________.

ಅ) ಅಪ್ಪ ಆ) ಅಮ್ಮ ಇ) ಅಜ್ಜಿ ಈ) ತಾತ

3 ಹಣ್ಣುಳ್ಳ ಗಿಡಕ್ಕೆ ___________ ಮುದ್ದು.

ಅ) ಆನೆ ಆ) ಗಿಣಿ ಇ) ಸಿಂಹ ಈ) ಮೊಲ

4 ತಾಯಿಯು ಮಗುವಿಗೆ ___________ ದೃಷ್ಟಿ ತೆಗೆಯುವಳು.

ಅ) ಕರಿಬೇವಿನ ಆ) ಹೂವಿನ ಇ) ಮಾವಿನ ಎಲೆ ಈ) ಅರಿಶಿನ

5. ನನ್ನ ಕಂದಾ ಮುದ್ದು ಹೊನ್ನ __________ ಮುದ್ದು.

ಅ) ಗುಲಾಬಿ ಆ) ತಾವರಿ ಇ) ಪುಕ್ಕ ಈ) ಗಿಡ

## SECTION - B

### ( ಅನ್ವಯಿಕ ವ್ಯಾಕರಣ ಮತ್ತು ಪಠ್ಯ ಪೂರಕ ಅಧ್ಯಯನ - 20 ಅಂಕಗಳು )

**V ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** (10 x1=10)

1 ' ಒಡ್ಡೋಲಗ '- ಈ ಪದದ ಸಮಾನಾರ್ಥಕ ಪದ

ಅ) ದೊಡ್ಡ ದರ್ಬಾರು ಆ) ಚಿಕ್ಕ ದರ್ಬಾರು ಇ) ಮೈದಾನ ಈ) ಸಣ್ಣ ದರ್ಬಾರು

2. ' ಸಫಲತೆ '- ಈ ಪದದ ವಿರುದ್ಧ ಪದ

ಅ) ಆಸಫಲತೆ ಆ) ವಿಫಲತೆ ಇ) ಸಫಲತಾ ಈ) ಫಲತೆ

3. ' ತೊಟ್ಲಾನ '– ಈ ಪದದ ಗ್ರಾಂಥಿಕ ರೂಪ

ಅ) ತೊಟ್ಟಿನ ಆ) ತೊಟ್ಲಾನ ಇ) ತೊಟ್ಟಲಿನ ಈ) ಬಟ್ಟಲಿನ

4. ಮೋಹನನು ಕುರುಡನ ಕೈ ಹಿಡಿದು ರಸ್ತೆಯನ್ನು ದಾಟಿಸಿದನು. ಈ ವಾಕ್ಯದಲ್ಲಿರುವ ಅನ್ವರ್ಥನಾಮ

ಅ) ಮೋಹನನು ಆ) ದಾಟಿದನು ಇ) ರಸ್ತೆಯನ್ನು ಈ) ಕುರುಡ

5. ' ಶಿಕ್ಷಕ '- ಈ ಪದದ ಅನ್ಯಲಿಂಗ ರೂಪ

ಅ) ಶಿಕ್ಷಕ ಆ) ಶಿಕ್ಷಕರು ಇ) ಶಿಕ್ಷಕಿ ಈ) ಶಿಕ್ಷಿಕಾ

6. ' ಮೆರೆಯೋಣ ' - ಈ ಪದದ ಪದ್ಯದಲ್ಲಿರುವಂತೆ ಪ್ರಾಸಪದ ಗುರುತಿಸಿ.

ಅ) ನಲಿಯೋಣ ಆ) ಅನಲಿಯೋಣ ಇ) ಮೇರೆಯೋಣ ಈ) ಸೈನಿಕರು

7 ' ಗೆಳೆಯ ' - ಈ ಪದದ ಬಹುವಚನ ರೂಪ

ಅ) ಗೆಳತಿ ಆ) ಗೆಳೆಯಗಳು ಇ) ಗೆಳೆಯರು ಈ) ಗೆಳತಿಯರು

8. ಕರ್ನಾಟಕದ ರಾಜಧಾನಿ ಯಾವುದು ? - ಈ ವಾಕ್ಯದಲ್ಲಿರುವ ಲೇಖನ ಚಿಹ್ನೆ.

ಅ) ಅಲ್ಪವಿರಾಮ ಚಿಹ್ನೆ ಆ) ಉದ್ಧರಣ ಚಿಹ್ನೆ ಇ) ಪ್ರಶ್ನಾರ್ಥಕ ಚಿಹ್ನೆ ಈ) ಪೂರ್ಣವಿರಾಮ ಚಿಹ್ನೆ

9 . ಮತ್ತೆ + ಒಬ್ಬ- ಈ ಪದವನ್ನು ಕೂಡಿಸಿ ಬರೆದಾಗ

ಅ) ಮತ್ತೆಯಿಬ್ಬ ಆ) ಮತ್ತೆಯೊಬ್ಬ ಇ) ಮತ್ತೆಬ್ಬ ಈ) ಮತ್ತೊಬ್ಬ

10. ' ಹೊಳೆ ' - ಈ ಪದದ ನಾನಾರ್ಥಕ ಪದ

ಅ) ಮೇಕೆ - ಕ್ರೀಡೆ ಆ) ಹೊಳೆ - ಹಳೆ ಇ) ನದಿ - ಮಿನುಗು ಈ) ಪರದೆ - ತೆಗೆ

VI ಕೆಳಗಿನವುಗಳನ್ನು ಸೂಚನೆಯಂತೆ ಬರೆಯಿರಿ (5 x 1 = 5)

1) ' ಸಡಗರ ' - ಈ ಪದವನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ

2) ಈ ಕೆಳಗಿನ ಗಾದೆಯನ್ನು ಪೂರ್ಣಗೊಳಿಸಿ.

ಕುಂಬಾರನಿಗೆ ವರುಷ ____________________.

3) ರಮೇಶನು ಸಂತೆಯಲ್ಲಿ ಸಿಹಿ ತಿಂಡಿಗಳನ್ನು ತಿಂದನು.- ವಾಕ್ಯದಲ್ಲಿರುವ ಕರ್ತೃ ಪದವನ್ನು ಗುರುತಿಸಿ

4) ಸುತ್ತೆಲ್ಲಾ ಬಿಳಿಗೋಡೆ, ಎತ್ತೆತ್ತ ನೋಡಿದರೂ ಬಾಗಿಲಿಲ್ಲ - ಈ ವಾಕ್ಯಕ್ಕೆ ಒಗಟಿನ ಉತ್ತರ ಬರೆಯಿರಿ.

5) ದೇಹದಲ್ಲಿ ಆರೋಗ್ಯವಂತ ಮನಸ್ಸಿರುತ್ತದೆ ಆರೋಗ್ಯವಂತ - ವಾಕ್ಯವನ್ನು ಸರಿಪಡಿಸಿ ಬರೆಯಿರಿ.

**VII ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ:** **(5 x 1 = 5)**

1. ನಮ್ಮ ನಾಡು ಇದರ ಗೂಡಾಗಿದೆ

ಅ) ಗಂಧದ ಆ) ಅನ್ನದ ಇ) ಬಣ್ಣದ ಈ ) ಕನ್ನಡಿಯ

2. ಕನ್ನಡ ನಾಡಿನ ಗಿರಿಗಳು ____________ ಮುಟ್ಟುತ್ತವೆ.

ಅ) ಭೂಮಿಯನ್ನು ಆ) ಮುಗಿಲನ್ನು ಇ) ಮರವನ್ನು ಈ ) ಕಟ್ಟಡವನ್ನು

3. ಮಕ್ಕಳು ಈ ಜಾಗದಲ್ಲಿ ಆಟವಾಡುತ್ತಿದ್ದರು .

ಅ) ರಸ್ತೆ ಆ) ಉದ್ಯಾನವನ ಇ) ಆಟದಮೈದಾನ ಈ ) ಮರದ ಕೆಳಗೆ

4. ನಗರ ಸಭೆಯ ಅಧ್ಯಕ್ಷರು ಕಸದ ಗಾಡಿಯನ್ನು ತರಲು ಇವರಿಗೆ ಹೇಳಿದರು

ಅ) ಅಧಿಕಾರಿಗಳಿಗೆ ಆ) ಶಿಕ್ಷಕರಿಗೆ ಇ) ಕೆಲಸದವರಿಗೆ ಈ ) ವಿದ್ಯಾರ್ಥಿಗಳಿಗೆ

5. ನಮ್ಮ ನಾಡು ________.

ಅ) ನಗರ ನಾಡು ಆ) ಅಂದದ ನಾಡು ಇ) ಕನ್ನಡ ನಾಡು ಈ ) ಸಂಸ್ಕೃತಿಯ ನಾಡು

## ಭಾಗ – B ( 40 ಅಂಕಗಳು)

## SECTION – C

### ( ಬರವಣಿಗೆಕೌಶಲ್ಯ-12 ಅಂಕಗಳು )

VIII. ಸುಳಿವು ಪದಗಳ ಸಹಾಯದಿಂದ ಕಥೆಯನ್ನು ಪೂರ್ಣಗೊಳಿಸಿ. (1/2*8=4)

( ಸಂಖ್ಯೆ, ಬುದ್ಧಿ, ಮರ ಕಡಿಯುವುದು, ಅರಣ್ಯ, ಸೋಮ, ನೆರಳು , ಆಸ್ಪತ್ರೆ , ತಲೆತಿರುಗಿ )

ಒಂದು ಊರಿನಲ್ಲಿ 1)________ ಎಂಬ ವ್ಯಕ್ತಿ ಇದ್ದ. ದಿನಾ 2)________ ಅವನ ಕೆಲಸ. ಆತ ನಿತ್ಯ ಪಕ್ಕದ ಕಾಡಿಗೆ ಹೋಗಿ ಮರಗಳನ್ನು ಕಡಿದು ಅದನ್ನು ಮಾರಿ ಜೀವನ ಸಾಗಿಸುತ್ತಿದ್ದ. ಯಾರು ಎಷ್ಟು 3)________ ಹೇಳಿದರೂ ಮರ ಕಡಿಯುವುದನ್ನು ಮಾತ್ರ ಆತ ಬಿಡಲಿಲ್ಲ. 4)________ ಇಲಾಖೆಯವರು ಸಾಕಷ್ಟು ಸಲ ಅವನನ್ನು ಕರೆದು ಎಚ್ಚರಿಕೆ ನೀಡಿದರೂ ಆತ ತನ್ನ ಈ ಅಕ್ರಮ ಕೆಲಸ ಮಾತ್ರ ಬಿಡಲಿಲ್ಲ. ಹೀಗೆ ಪ್ರತಿದಿನ ಮರಗಳನ್ನು ಕಡಿಯುತ್ತಿರುವ ಕಾರಣ ಆ ಕಾಡಿನಲ್ಲಿ ಮರಗಳ 5)________ ಕಡಿಮೆಯಾಯಿತು. ಕಡಿದು ಕಡಿದು ಕೊನೆಗೆ ಅಲ್ಲಿ ಕೇವಲ ಒಂದೇ ಒಂದು ಮರ ಉಳಿಯಿತು. ಮರಗಳ ನಾಶದಿಂದ ಎಲ್ಲಿ ನೋಡಿದರೂ ಬಿಸಿಲೇ ಬಿಸಿಲು. 6) ________ ಕೂಡ ಇರಲಿಲ್ಲ. ಆಯಾಸ ಮತ್ತು ಬಿಸಿಲಿನ ತಾಪದಿಂದ ಆತ 7)________ ಬಿದ್ದ. ಜನ ಸೇರಿ ಸೋಮನನ್ನು ಎತ್ತಿಕೊಂಡು ಹೋಗಿ 8)________ ಗೆ ಸೇರಿಸಿದರು. ಅಲ್ಲಿ ಸಕಾಲದಲ್ಲಿ ಚಿಕಿತ್ಸೆ ದೊರೆತಿದ್ದರಿಂದ ಅವನು ಪ್ರಾಣಾಪಾಯದಿಂದ ಪಾರಾದ.

IX. ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯವನ್ನು ಕುರಿತು 5/6 ವಾಕ್ಯದಲ್ಲಿ ಬರೆಯಿರಿ. (4)

1. ನನ್ನ ನೆಚ್ಚಿನ ಹಣ್ಣು
2. ನನ್ನ ತಾಯಿ
3. ನನ್ನ ನೆಚ್ಚಿನ ಪ್ರಾಣಿ

X. ಯಾವುದಾದರೂ 4 ಒಳ್ಳೆಯ ಅಭ್ಯಾಸಗಳ ಬಗ್ಗೆ ನಾಲ್ಕು ವಾಕ್ಯಗಳಲ್ಲಿ ಬರೆಯಿರಿ. (4)

## SECTION – D

( ಪದ್ಯಗಳ ಅಧ್ಯಯನ – 28 ಅಂಕಗಳು )

XI ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ . (6x1=6)

1. ನಾವು ಯಾವಾಗ ವಿಶಾಲ ಹೃದಯಿಗಳಾಗುತ್ತೇವೆ ?
2. ರಂಗ ಮತ್ತು ಸಾಧಿಕ್ ದಿನಾಲು ಯಾವುದರಲ್ಲಿ ಶಾಲೆಗೆ ಹೋಗುತ್ತಿದ್ದರು ?
3. ಸೇತು ಮಾವಿನ ಹಣ್ಣನ್ನು ನೋಡಿ ಏನು ಮಾಡಿದ ?
4. ಗಣತಿ ಪದದ ಅರ್ಥವೇನು ?
5. ನೇರಳೆ ಮರವನ್ನು ಹತ್ತಿದವರು ಯಾರು ?
6. ಮಕ್ಕಳ ಜಗಳವನ್ನು ಯಾರು ನೋಡಿದರು ?

XII . ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿ . (5 x 2 =10)

1. ಪೊದೆಯಲ್ಲಿದ್ದ ಹಾವನ್ನು ಕಂಡ ಸಾಧಿಕ್ ರಂಗನಿಗೆ ಏನೆಂದನು ?
2. ವೈದ್ಯರಿಗೆ ಮಕ್ಕಳ ಜೇಬಿನಿಂದ ಏನೆಲ್ಲ ಸಿಕ್ಕಿದವು ?
3. ಅಕ್ಬರನ ಕಾಗೆಗಳೆಷ್ಟು ಎಂಬ ಪ್ರಶ್ನೆಗೆ ಬೀರಬಲ್ಲನ ಉತ್ತರವೇನು ?
4. ಎಲ್ಲ ದೇಶಕು ಎಲ್ಲ ಕಾಲಕು ಏನನ್ನು ಹಂಚಬೇಕು?ಹಾಗೂ ನಾವು ಯಾವ ಬಗೆಯ ರಾಷ್ಟ್ರವನ್ನು ಕಟ್ಟಬೇಕು ?
5. ಮಕ್ಕಳ ಹಲ್ಲುಗಳು , ಒಸಡುಗಳು ಹೇಗಿದ್ದವು ?

XIII . ಈ ಮಾತನ್ನು ಯಾರು – ಯಾರಿಗೆ ಹೇಳಿದರು . (3x2=6)

1. " ಏ ಬಾಲು , ಕೊಡೋ , ಅದು ನನ್ನ ಹಣ್ಣು " ?
2. " ಅಜ್ಜಿಗೆ ಕಚ್ಚಿರುವ ಹಾವು ವಿಷದ ಹಾವಲ್ಲ " ?
3. " ತಲೆ ಕೆಟ್ಟಿದೆಯೇನೋ ನಿಂಗೆ " ?

XIV . ಕೆಳಗಿನ ಪ್ರಶ್ನೆಗೆ ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ . (3x1=3)

1. ನಾವು ಭಾರತ ಮಾತೆಯ ಮಂದಿರದಲ್ಲಿ ಹೇಗೆ ವಿಶಾಲ ಹೃದಯಿಗಳಾಗಿ ಬಾಳಬೇಕು ?

XV ಕೆಳಗಿನ ಪ್ರಶ್ನೆಗೆ ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ . (3x1=3)

1. ಬಾಲು ಮತ್ತು ಸೇತು ನಡೆಸಿದ ಜಗಳವನ್ನು ವಿವರಿಸಿರಿ ?

****